**ಓ.ಎಸ್. ನಂ. 328/2014 ಡಿ.ಡಬ್ಲೂ-2 ಹೆಸರು – ಶಿವಕುಮಾರ್**

**ಸಾಕ್ಷಿಯನ್ನು ದಿನಾಂಕಃ 02.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್.ಪಿ.ಎಸ್. ವಾದಿ ಪರ ವಕೀಲರಿಂದಃ**

ನನಗೆ 35-36 ವರ್ಷ ವಯಸ್ಸು. ಈ ದಾವೆ ಸಲ್ಲಿಸಿರುವ ವಿಚಾರ ನನಗೆ ತಿಳಿದು ಸುಮಾರು 4-5 ವರ್ಷ ಆಗಿರುತ್ತದೆ. ಈ ದಾವೆಯ ನೋಟಿಸು ನನಗೆ ತಲುಪಿರುವ ಬಗ್ಗೆ ನನಗೆ ನೆನಪಿಲ್ಲ. ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿದ್ದಾರೆ. ಸಾಕ್ಷಿ ಮುಂದುವರೆದು ದಾವಾ ಸ್ವತ್ತುಗಳಲ್ಲಿ ನಮಗೂ ಭಾಗ ಬರಬೇಕು ಎಂದು ನುಡಿಯುತ್ತಾರೆ. ಈ ದಾವೆಯನ್ನು ಸರ್ವೆ ನಂ. 100/1 ಹಾಗೂ 94/2 ರ ಮೇಲೆ ಸಲ್ಲಿಸಲಾಗಿದೆ.

2 ನೇ ಪ್ರತಿವಾದಿ ನನ್ನ ಮಾವ. 2 ನೇ ಪ್ರತಿವಾದಿ ಹಾಗೂ ನನ್ನ ತಂದೆಯ ನಡುವೆಯಾಗಿರುವ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಸರ್ವೆ ನಂ. 100/1 ಸ್ವತ್ತನ್ನು ವೀರಭದ್ರಪ್ಪನವರಿಗೆ ಭೋಗ್ಯ ಮಾಡಿದ್ದಾಗಿ ತಿಳಿಸಿರುತ್ತಾರೆ. ಮತ್ತೆ ಹಣ ಬೇಕು ಎಂದು ಹೋದಾಗ ರೂ. 5,000/- ಗಳಿಗೆ ನೋಂದಾಯಿತ ಭೋಗ್ಯ ಪತ್ರ ಮಾಡಿಸಿಕೊಂಡಿದ್ದು ರೂ.1,000/- ಹಣವನ್ನು ನೋಂದಣಿ ಖರ್ಚಿಗಾಗಿ ಹಿಡಿದುಕೊಂಡು ಕೇವಲ ರೂ. 4,000/- ಗಳನ್ನು ನನ್ನ ತಂದೆಗೆ ನೀಡಿರುತ್ತಾರೆ. 2 ನೇ ಪ್ರತಿವಾದಿ ಭೋಗ್ಯ ಪತ್ರ ಮಾಡಿಸುತ್ತಿದ್ದೇನೆ ಎಂದು ಹೇಳಿ ಭೋಗ್ಯ ಪತ್ರ ಮಾಡಿಸದೇ ಕ್ರಯ ಪತ್ರ ಮಾಡಿಸಿಕೊಂಡಿರುತ್ತಾರೆ. ದಿಃ 20.03.2000 ರಲ್ಲಿ ನಮ್ಮ ತಂದೆಗೆ ಹಣದ ಅವಶ್ಯಕತೆ ಇರಲಿಲ್ಲ. ಆ ಸಮಯದಲ್ಲಿ ನಮ್ಮನ್ನು ನಮ್ಮ ತಾತ – ಅಜ್ಜಿ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡಿದ್ದಾರೆ ಎಂದು ಹೇಳುವ ವಿಚಾರ ಸುಳ್ಳು.

**ಓ.ಎಸ್. ನಂ. 328/2014 ಡಿ.ಡಬ್ಲೂ-2 ಹೆಸರು - ಶಿವಕುಮಾರ್**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**